ಶ್ರೀ ಎಸ್. ಗೊಪಾಲಗೌಡ.—ಈಗ ಚೀಫ್ ಮಿನಿಸ್ಟರ್ ಅವರು ಇಲ್ಲಿ ಯಾವುದೋ ಒಂದು ಸ್ಕೂಲಿನಲ್ಲಿ ಪಾಠ ಹೇಳಿದರು ; ಅದನ್ನು ಇಲ್ಲಿ ಸೇರಿನಲಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ವಿದ್ಯಾದಾನ—ಭೂದಾನ ಚಳವಳಿಯನ್ನು ಏಕಕಾಲದಲ್ಲಿ ನಡೆಸುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ಯಾರಾದರೂ ಮಂತ್ರಿಗಳೇ ಆಗಲಿ ಇಲಾಖೆಗೆ ಸಂಬಂಧಪಡದಿದ್ದ ಹೊರಗಡೆಯವರೇ ಆಗಲಿ ಇಲಾಖೆಯ ಸರ್ಟಿಫಿಕೇಟ್ ಇದೆ ಎಂದು ಹೇಳಿ ಪಾಠ ಮಾಡುವುದಕ್ಕೆ ಬಂದದ್ದೇ ಆದರೆ, ಅವರು ಯಾವ capacity ಯಲ್ಲಿ ಪಾಠಹೇಳುತ್ತಾರೆ ಎನ್ನುವುದು ತೀರ್ಮಾನವಾಗದೆ, ನನ್ನಂಥವರು ಇಷ್ಟೆಷಟ್ಟು ಸ್ಕೂಲಿಗೆ ಹೋಗಿ ಪಾಠ ಹೇಳುವುದರಿಂದ ಆ ಸ್ಕೂಲಿನ ಉಪಾಧ್ಯಾಯರುಗಳು ಪಾಠ ಹೇಳಿಕೊಡುವುದಕ್ಕೂ ಮತ್ತು ವಿದ್ಯಾಭ್ಯಾಸದ ಕ್ರಮಕ್ಕೂ ಧಕ್ಕೆ ಬರುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಧಕ್ಕೆ ಏನೂ ಬರುವುದಿಲ್ಲ. ವಿದ್ಯಾದಾನ ಮಾಡುತ್ತೇವೆ ಎಂದು ಬರುವವರು, ಅವರು ಯಾವ ವಿಷಯದಲ್ಲಿ ವಿದ್ಯೆಯನ್ನು ಹೇಳಿಕೊಡುವುದಕ್ಕೆ ಸಿದ್ಧವಾಗಿದ್ದಾರೆ ಎಂಬುದನ್ನು ನೋಡಿಕೊಂಡು ಅವರಿಗೆ ಅವಕಾಶ ಕೊಡಲಾಗುತ್ತಿದೆ ಮತ್ತು ಅವರು ಕೊನೆಯಪಕ್ಷ ಒಂದು ವರ್ಷವಾದರೂ ಪಾಠ ಹೇಳಿಕೊಡುವುದಕ್ಕೆ ಒಪ್ಪಿಕೊಳ್ಳಬೇಕು. ಹಾಗಿದ್ದಪಕ್ಷದಲ್ಲಿ ಅವರ ಸೇವೆಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರದವರು ಯೋಚನೆಮಾಡಿ ಅಂಥವರಿಗೆ ಕಾಗದ ಬರೆಯುತ್ತಾರೆ. ಯಾವ ಅಡ್ಡಿಯೂ ಆಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಸಂಬಂಧಪಟ್ಟ ಸ್ಕೂಲಿನವರು, ಇಂಥ ವಿಷಯದ ಮೇಲೆ ಪಾಠವನ್ನು ಹೇಳತಕ್ಕದ್ದು ಮತ್ತು ಇಂಥ ಕಾಲದಲ್ಲಿ ಬಂದು ಹೇಳುವುದು ಎನ್ನುವುದನ್ನು ಮೊದಲೇ ತೀರ್ಮಾನಮಾಡಿ ತಿಳಿಸಿ, ಆರೀತಿ ಕಾರ್ಯಕ್ರಮ ನಡೆಯುತ್ತಾ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಆರೀತಿಯೇ ನಿರ್ಣಯ ಮಾಡುವುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಗ್ರಾಮಗಳಲ್ಲಿ ಕೊಟ್ಟಿರತಕ್ಕ ಜಮೀನುಗಳನ್ನು ಆಯಾ ಸ್ಕೂಲಿನ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿ ಕೊಟ್ಟಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕರು ರಿಜಿಸ್ಟರ್ ಮಾಡಿಸಿಕೊಟ್ಟಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ದಾನವಾಗಿ ಕೊಟ್ಟಿರುವ ಜಮೀನುಗಳ ಮೇಲೆ ಕಂದಾಯವನ್ನು ವಸೂಲು ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಲ್ಲಿ ತೊಂದರೆ ಏನೂ ಕಾಣಲಿಲ್ಲ ; ಅಂಥ ತೊಂದರೆಯೇನೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ದಾನವಾಗಿ ಕೊಟ್ಟಿರುವ ಜಮೀನಿನಲ್ಲಿ ಬೀಳುಬಿದ್ದಿರುವುದೆಷ್ಟು, ಸಾಗುವಳಿಯಾಗುತ್ತಿರುವುದೆಷ್ಟು ಎಂಬ ವಿವರ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿವರ ತಿಳಿದು ಹೇಳಬೇಕು.

ಶ್ರೀ ಎಸ್. ಸಿದ್ದಪ್ಪ.—ಈ ಭೂದಾನ-ವಿದ್ಯಾದಾನ ಚಳವಳಿ ವಿಚಾರದಲ್ಲಿ ಇತರ ಸಂಸ್ಥಾನಗಳಿಗಿಂತಲೂ ಮೊದಲನೆಯದಾಗಿ ಒಂದು ಅವಕಾಶವನ್ನು ಕಲ್ಪಿಸಿಕೊಂಡು ಯಶಸ್ವಿಯಾಗಿ ಕೆಲಸಮಾಡಿದ್ದು ಮೈಸೂರು ಸಂಸ್ಥಾನವೇ ? ಯಾವುದು ಸ್ವಾಮಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನಾವ ಸಂಸ್ಥಾನ ಈ ರೀತಿ ಕೆಲಸ ಮಾಡಿದೆ ಎಂಬುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಇಡೀ ಪ್ರಪಂಚದಲ್ಲಿ ಮೊದಲು ಈ ವಿದ್ಯಾದಾನ, ಭೂದಾನ ಚಳವಳಿಯನ್ನು ನಮ್ಮ ನಾಯಕರು ಈ ನಮ್ಮ ದೇಶದಲ್ಲಿ ಪ್ರಾರಂಭ ಮಾಡಿದ್ದಾರೆ. ನಮ್ಮ ದೇಶ ವ್ಯವಸಾಯದ ದೇಶ. ಈ ದೇಶದ ವಿದ್ಯಮಾನಕ್ಕನುಗುಣವಾಗಿ ಈ ಕಾರ್ಯಕ್ರಮ ಅತ್ಯುನ್ನತವಾಗಿ ಲಾಭದಾಯಕವಾಗಿದೆಯಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಮೊದಲೇ ಜವಾಬು ಹೇಳಿದ್ದೇನೆ.

ಅಧ್ಯಕ್ಷರು.—ತಮ್ಮ ಪ್ರಶ್ನೆಗೆ ತಾವೇ ಜವಾಬು ಹೇಳಿದ್ದೀರಿ.

ಶ್ರೀ ಎಸ್. ಸಿದ್ದಪ್ಪ.—ಲಾಭದಾಯಕವಾಗಿದೆ ಎಂದರೆ ಏನು ಲುಕ್ಸಾನಾಗುತ್ತದೆ ಸ್ವಾಮಿ !

(ನಗೆಯಲ್ಲಿ ನಗು !)

ಶ್ರೀ ಎ. ಜಿ. ರಾಮಚಂದ್ರರಾವ್.—34 ಸಾವಿರ ಎಕರೆ ಬಂದಿದೆ ಎನ್ನುವುದು ಲಾಭದಾಯಕವೆಂದು ತಮಗೇ ಗೊತ್ತಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ಆ 34 ಸಾವಿರ ಎಕರೆಗೆ ವ್ಯಾಲ್ಯುಯೇಷನ್ ಅಂದಾಜು ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲೇ ಹೇಳಿದೆ. 50 ಲಕ್ಷ ರೂಪಾಯಿ ಬಾಳಬಹುದು ಎಂದು ಹೇಳಿದ್ದೇನೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ ವ್ಯವಸಾಯಕ್ಕೆ ಲಾಯಕ್ಕಾಗಿರತಕ್ಕ ಜಮೀನಿನ ಲೆಕ್ಕ ಎಷ್ಟು ಸ್ವಾಮಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಮ್ಮ ಅಭಿಪ್ರಾಯದಲ್ಲಿ ದಾನ ಕೊಟ್ಟಿರುವವರೆಲ್ಲರೂ ಸದ್‌ಭಾವನೆಯಿಂದ ಕೊಟ್ಟಿದ್ದಾರೆ. ವ್ಯವಸಾಯಕ್ಕೆ ಲಾಯಕ್ಕಾಗಿದೆ ಎಂದು ಭಾವನೆ.

ಶ್ರೀ ಸಿ. ಟಿ. ಹನುಮಂತಯ್ಯ.—ತಾವು ಪರಿಶೀಲನೆ ಮಾಡಿ ನೋಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡಿಯೂ ಇದ್ದೇನೆ.

ಶ್ರೀ ಸಿ. ಟಿ. ಹನುಮಂತಯ್ಯ.—ಆ ಜಮೀನುಗಳ ಕಂದಾಯದ ಬಾಕಿ ಎಷ್ಟಿದೆ ಸ್ವಾಮಿ ?

ಅಧ್ಯಕ್ಷರು.—ಬೇರೆ ಪ್ರಶ್ನೆ ಇದ್ದರೆ ಕೇಳಿ.

Devaramaradi Tank, Chicknayakanahalli Taluk.

Q.—642. Sri C. H. LINGADEVARU (Chicknayakanahalli).—

Will the Government be pleased to state :—

(*a*) whether they have sanctioned the construction of Devaramaradi Tank in Chicknayakanahalli Taluk ?

(*b*) when this work will be started ?

A.—Sri H. M. CHANNABASAPPA (Minister for Industries).—

(*a*) Yes.

(*b*) During next year.

ಶ್ರೀ ಸಿ. ಎಚ್. ಲಿಂಗದೇವರು.—ಈ ಕೆರೆಯನ್ನು ಮುಂದಿನ ವರ್ಷ ಕಟ್ಟಿಸಲಾಗುತ್ತದೆ ಎಂದು ಹೇಳಿದ್ದೀರಿ. ಎಸ್ಟಿಮೇಟ್ ಎಷ್ಟಾಗಿದೆ ಸ್ವಾಮಿ ಈ ಕೆಲಸಕ್ಕೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—1 ಲಕ್ಷ 88 ಸಾವಿರ ರೂಪಾಯಿ ಆಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ವರ್ಷದ ಬಜೆಟ್‌ನಲ್ಲಿ ಹಣ ಒದಗಿಸಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣ ಒದಗಿಸಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಎಷ್ಟು ರೂಪಾಯಿ ಸ್ವಾಮಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—5,000 ರೂಪಾಯಿ ಒದಗಿಸಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ರೀತಿ ಹಣ ಒದಗಿಸುತ್ತಾ ಹೋದರೆ ಎಷ್ಟು ವರ್ಷಕ್ಕೆ ಈ ಕೆಲಸ ಪೂರ್ತಿ ಆಗುವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—5,000 ರೂಪಾಯಿ ಒದಗಿಸಲಾಗಿದೆ. ಇನ್ನೂ ಹೆಚ್ಚಿಗೆ ಬೇಕಾದರೆ ಏರ್ಪಾಡುಮಾಡುತ್ತೇವೆ.

Bridges and Roads sanctioned for Bellary District.

Q.—260. Sri IJARI SIRASAPPA (Harapanahalli).—

Will the Government be pleased to state :—

the reason for the delay in execution of the bridges and roads sanctioned in Bellary District since the past two years?

A.—Sri H. M. CHANNABASAPPA (Minister for Industries).—

There has been no avoidable delay. Action is being taken to take up the works and complete them as early as possible.

Sri IJARI SIRASAPPA.—On the assurance given by Government in the answer, I have no supplementaries.

ಶ್ರೀ ಕೊಟ್ರಬಸವನಗೌಡ.—ಎಷ್ಟು ಸೇತುವೆಗಳನ್ನು ಕಟ್ಟಲಾಗುತ್ತಿದೆ ಸ್ವಾಮಿ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಲ್ಕೈದು ಮಂಜೂರಾಗಿವೆ, ಇನ್ನೂ ಎರಡು ಮಂಜೂರಾಗುವುದರಲ್ಲಿವೆ.

ಶ್ರೀ ಕೊಟ್ರಬಸವನಗೌಡ.—ಮಂಜೂರಾಗಿರುವುದು ಯಾವುದು, ಆಗಿಲ್ಲದೇ ಇರುವುದು ಯಾವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೋನಿ-ಸಿರಗುಪ್ಪ ರಸ್ತೆಯ 20/3-4ನೇ ಮೈಲಿಯಲ್ಲಿ 3 ಲಕ್ಷ 35 ಸಾವಿರ ರೂಪಾಯಿನ ಕೆಲಸ ಆಗಿ ಮುಗಿಯುವುದಕ್ಕೆ ಬಂದಿದೆ. ಎಚ್.ಎಂ.ಎಫ್. ರಸ್ತೆಯ 3 1/8ನೇ ಮೈಲಿಯಲ್ಲಿ 1 ಲಕ್ಷ 33 ಸಾವಿರದ 500 ರೂಪಾಯಿನ ಅಂದಾಜು ಮಂಜೂರಾಗಿ ಕೆಲಸ ನಡೆಯುತ್ತಿದೆ. ಎಚ್. ಎಂ. ಎಫ್. ರಸ್ತೆಯ 28/8ನೇ ಮೈಲಿಯಲ್ಲಿ 75 ಸಾವಿರ ರೂಪಾಯಿನ ಅಂದಾಜಾಗಿ ಟೆಂಡರ್ ಅಪ್ರೂವ್ ಆಗಿದೆ. ಎಚ್.ಕೆ.ಕೆ.ಎಸ್.ಟಿ. ರಸ್ತೆ, ಚಿಕ್ಕಹಗರಿನಲ್ಲಿ 4 ಲಕ್ಷ 44 ಸಾವಿರ ರೂಪಾಯಿಗಳ ಅಂದಾಜು ಮಂಜೂರಾಗಿದೆ, ಮತ್ತು ಟೆಂಡರ್ ಶಿಫಾರಸಾಗಿ ಬಂದಿದೆ. ಎಚ್.ಕೆ.ಕೆ.ಎಸ್.ಟಿ. ರಸ್ತೆ ಬನ್ನಿಹಳ್ಳಿ ಹಳ್ಳಕ್ಕೆ ಅಡ್ಡಲಾಗಿ ಕಟ್ಟುವ ಸೇತುವೆಗೆ 1 ಲಕ್ಷ 60 ಸಾವಿರ ರೂಪಾಯಿ ಮಂಜೂರಾಗಿದೆ, ಮತ್ತು ಟೆಂಡರು ಶಿಫಾರಸಾಗಿ ಬಂದಿದೆ. ಅದೇ ರಸ್ತೆಯಲ್ಲಿ ಮರೂರು ಹಳ್ಳಕ್ಕೆ 1 ಲಕ್ಷ 45 ಸಾವಿರ ರೂಪಾಯಿನ ಅಂದಾಜು ಮಂಜೂರಾಗಿದೆ, ಟೆಂಡರ್ ಶಿಫಾರಸಾಗಿ ಬಂದಿದೆ. ಮತ್ತು ನಂಡೂರು-ತೋರಂಗಲ್ ರಸ್ತೆಯ 23/2 ಮೈಲಿಯಲ್ಲಿ ಒಂದು ಸೇತುವೆ ಕಟ್ಟಬೇಕೆಂದು ಇದೆ. ಅದು ಸ್ಕೂಟಿನಿಯಲ್ಲಿದೆ.

QUESTIONS FOR ANSWERS ON THE DAY

(But not taken up).

Girl Students studying in Colleges in Corporation Area, Bangalore.

Q.—287. Sri P. R. RAMAIYA (Basavanagudi).—

Will the Government be pleased to state :—

(*a*) the number of women students studying in the College Classes in the area of the Corporation of the City of Bangalore ;

(*b*) how many women hostels there are for college girls in the above area ;

(*c*) whether it has come to their notice that there is need for at least one more big hostel for college girls in the above area ;

(*d*) whether they will take early steps to start one more women students' hostel in the southern part of the City?

A.—Sri A. G. RAMACHANDRA RAO (Minister for Law and Education).—

(*a*) 2,008.

(*b*) Two Hostels.

(*c*) Yes.

(*d*) Sanction has been accorded for construction of 10 additional living